ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 3, July-August 2025, Pp. 166-176
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಆಂಟೋನಿಯೋ ಗ್ರಾಂಸಿಯವರ ರಾಜಕೀಯ ಚಿಂತನೆಗಳು: ಒಂದು ವಿಶ್ಲೇಷಣೆ

**ಮಧುಸೂಧನ್.ಸಿ[1] ಮತ್ತು ಡಾ.ಎಸ್.ನಾಗರತ್ನಮ್ಮ[2]**
[1]ಸಂಶೋಧನಾ ವಿದ್ಯಾರ್ಥಿ, [2]ಪ್ರಾಧ್ಯಾಪಕರು
ಇತಿಹಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

**Abstract:**
*ಪ್ರಸ್ತುತ ಈ ಲೇಖನವು ಇಟಲಿಯ ಮಾರ್ಕ್ಸ್‌ವಾದಿ ರಾಜಕೀಯ ಸಿದ್ಧಾಂತವಾದಿ ಹಾಗೂ ಕಾರ್ಮಿಕ ಚಳುವಳಿಯ ಹೋರಾಟಗಾರ ಆಂಟೋನಿಯೋ ಗ್ರಾಂಸಿಯವರ ರಾಜಕೀಯ ಚಿಂತನೆಗಳನ್ನು ಪ್ರಸ್ತುತ ಪಡಿಸುವ ಉದ್ದೇಶವನ್ನು ಹೊಂದಿರುತ್ತದೆ. ಒಬ್ಬ ವ್ಯಕ್ತಿಯ ಪ್ರಾಥಮಿಕ ಸಾಮಾಜೀಕರಣ ಹಾಗೂ ಅವನ ರಾಜಕೀಯ ಚಿಂತನೆಗಳ ಮೇಲೆ ಗಮನ ಕೇಂದ್ರೀಕರಿಸುವ ಮುನ್ನ ಆತನ ಆರಂಭಿಕ ಜೀವನ ಮತ್ತು ಅವನ ಸುತ್ತಮುತ್ತಲಿನ ಪರಿಸರವನ್ನು ಅರ್ಥಮಾಡಿಕೊಳ್ಳುವುದು ಉತ್ತಮ, ಏಕೆಂದರೆ ಪ್ರತಿಯೊಬ್ಬ ಮನುಷ್ಯನ ಆಲೋಚನೆಯು ಅವನ ಸುತ್ತ ಮುತ್ತಲಿನ ಪರಿಸರವನ್ನು ಅವಲಂಬಿಸಿರುತ್ತದೆ. ಗ್ರಾಂಸಿಯವರ ಯಜಮಾನಿಕೆ/ಪ್ರಾಬಲ್ಯದ ಸಿದ್ಧಾಂತದ ಕಲ್ಪನೆಯನ್ನು ಕೇಂದ್ರೀಕರಿಸಿ ಈ ಲೇಖನವನ್ನು ಸಿದ್ಧಪಡಿಸಲಾಗಿದೆ.*

**Keywords:** *ಆಂಟೋನಿಯೋ ಗ್ರಾಂಸಿ, ಯಜಮಾನಿಕೆ/ಪ್ರಾಬಲ್ಯದ ಸಿದ್ಧಾಂತ, ರಾಜಕೀಯ ಚಿಂತನೆಗಳು, ಹೆಗಿಮನಿ, ಬೂರ್ಜ್ವಾ ಶ್ರಮಜೀವಿ, ಪ್ರಾಕ್ಸಿಸ್ ಸಬಾಲ್ಟರನ್*

## ಪೀಠಿಕೆ

ಗ್ರಾಂಸಿಯವರ ಯಜಮಾನಿಕೆ/ಪ್ರಾಬಲ್ಯದ ಸಿದ್ಧಾಂತದ ಪ್ರಕಾರ ಪ್ರಾಬಲ್ಯವು ಒಂದು ಸಾಂಸ್ಕೃತಿಕ ಪ್ರಕ್ರಿಯೆಯಾಗಿದ್ದು, ಅದರ ಮೂಲಕ ಒಂದು ವರ್ಗವು ಇನ್ನೊಂದು ವರ್ಗವನ್ನು ನಿಯಂತ್ರಿಸುತ್ತದೆ. ಹೀಗೆ ಪ್ರಾಬಲ್ಯವುಳ್ಳವರು ಅಧಿಕಾರದ ಮಂತ್ರವನ್ನು ಜಪಿಸುತ್ತಲೇ ಇರುತ್ತಾರೆ. ಹಾಗೆ ತಮ್ಮ ಅಧೀನದ ಜನರನ್ನು ತಮ್ಮನ್ನು ಪಾಲಿಸುವಂತೆ ಮಾಡುತ್ತಾರೆ. ಸರಳವಾಗಿ ಹೇಳುವುದಾದರೆ ಸಾಮಾನ್ಯರ ಕಿವಿಗೆ ಏನನ್ನಾದರೂ ಹಾಕುವುದು ಮತ್ತು ಅದರಂತೆ ಅದನ್ನು ನಂಬುವಂತೆ ಮಾಡುವುದು.

ಗ್ರಾಂಸಿಯ ಪ್ರಮುಖ ರಾಜಕೀಯ ಚಿಂತನೆಗಳಲ್ಲಿ ಪ್ರಭುತ್ವ ಹಾಗೂ ನಾಗರಿಕ ಸಮಾಜ State and Civil Society, ಯಜಮಾನಿಕೆ (ಹೆಗಮನಿ), ಸಾಮಾನ್ಯ ಗ್ರಹಿಕೆ (ಕಾಮನ್ ಸೆನ್ಸ್), ಕೆಳಸ್ಥರದ ಜನರು/ನಿರ್ಲಕ್ಷಿತ ಸಮುದಾಯಗಳು (ಸಬಾಲ್ಟರನ್), ಪರೋಕ್ಷ ಕ್ರಾಂತಿ/ನಿಷ್ಕ್ರಿಯ ಕ್ರಾಂತಿ ಹೀಗೆ ಆಂಟೋನಿಯೋ ಗ್ರಾಂಸಿಯ ಬೌದ್ಧಿಕ ಸಾಮರ್ಥ್ಯ ಅಗಾದವಾದುದು, ಹೀಗೆ ಪ್ರತಿಯೊಬ್ಬ ಬುದ್ದಿ ಜೀವಿಯೂ ತನ್ನ ಚಿಂತನೆಯಲ್ಲಿಯೇ ಒಂದು ಬಗೆಯ ರಾಜಕೀಯ ಚಿಂತನೆಗಳನ್ನು ಪೋಷಿಸಿರುತ್ತಾನೆ. ಪ್ರತಿಯೊಬ್ಬ ಸಂಘಟಕನೂ ತನ್ನ ಸಂಘಟನಾ ಕಾರ್ಯದಿಂದ ಒಂದು ಬಗೆಯ ಚಿಂತನೆಗಳನ್ನು ಬೆಳಸಿರುತ್ತಾನೆ. ಹೀಗೆ ಗ್ರಾಂಸಿಯು ತನ್ನ ಜೀವನವನ್ನು ರಾಜಕೀಯ ಹಾಗೂ ವೈಚಾರಿಕಾ

**Please cite this article as:** ಮಧುಸೂಧನ್.ಸಿ ಮತ್ತು ಎಸ್.ನಾಗರತ್ನಮ್ಮ. (2025). ಆಂಟೋನಿಯೋ ಗ್ರಾಂಸಿಯವರ ರಾಜಕೀಯ ಚಿಂತನೆಗಳು: ಒಂದು ವಿಶ್ಲೇಷಣೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 4(3), 166–176

ಪ್ರಜ್ಞೆಯ ಬಹು ಮುಖ್ಯ ಭಾಗವನ್ನಾಗಿ ಮೀಸಲಿರಿಸಿದ ಬುದ್ಧಿಜೀವಿ ಹೋರಾಟಗಾರ. ಈ ಕಾರಣಕ್ಕಾಗಿ ಗ್ರಾಂಸಿಯ ಬದುಕು ಬರಹಗಳು ಎಲ್ಲ ಬಗೆಯ ಅಸಮಾನತೆಗಳ ವಿರುದ್ಧ ಸೆಣಸುವ ಬುದ್ಧಿಜೀವಿ, ಹೋರಾಟಗಾರರಿಗೆ ಸ್ಫೂರ್ತಿಯ ಸೆಲೆಯಾಗಿರುವುದನ್ನು ಪ್ರಸ್ತುತ ಪಡಿಸುವುದು ಈ ಲೇಖನದ ಬಹುಮುಖ್ಯ ಆಶಯ.

**ಗ್ರಾಂಸಿಯ ಬಾಲ್ಯ ಜೀವನ**

ಇಟಾಲಿಯನ್ ಜನರ ಸ್ವಾತಂತ್ರ್ಯಕ್ಕಾಗಿ ತನ್ನ ಜೀವನವನ್ನು ಮುಡಿಪಾಗಿಟ್ಟ ಹಾಗೂ ಕಾರ್ಲ್ ಮಾರ್ಕ್ಸ್‌ವಾದಿ ನಂತರದ ಶ್ರೇಷ್ಠ ಮಾರ್ಕ್ಸ್‌ವಾದಿ ಸಿದ್ಧಾಂತಿ, ಆಂಟೋನಿಯೋ ಗ್ರಾಂಸಿ, ಅದೇ ಸಮಯದಲ್ಲಿ ಇವರು ದಾರ್ಶನಿಕ, ಪತ್ರಕರ್ತ, ರಾಜಕಾರಣಿ ಮತ್ತು ಎಡಪಂಥೀಯ ಪಾಶ್ಚಿಮಾತ್ಯ ಚಿಂತಕರಲ್ಲಿ ಮೊದಲ ಇಟಾಲಿಯನ್ ಮಾರ್ಕ್ಸ್‌ವಾದಿ. ಆಂಟೋನಿಯೋಗ್ರಾಂಸಿಯು 22 ಜನವರಿ 1891 ರಂದು ಸಾರ್ಡಿನಿಯಾದ ಆಲೆಸ್‌ನಲ್ಲಿ ಅಲ್ಬೇನಿಯನ್ ಮೂಲದ ಮಧ್ಯಮ ವರ್ಗದ ಕುಟುಂಬದಲ್ಲಿ ಜನಿಸಿದವನು. ಇಟಲಿಯ ದಕ್ಷಿಣ ಪ್ರಾಂತ್ಯದಲ್ಲಿ ನೆಲೆಸಿರುವ ಸಾರ್ಡಿನಿಯಾ ದ್ವೀಪವು ವ್ಯಾಪಕ ಬಡತನ, ದುರ್ಬಲ ಸಾಮಾಜಿಕ ವ್ಯವಸ್ಥೆಯನ್ನು ಮೈಗೂಡಿಸಿಕೊಂಡು ಬೆಳೆದಿರುವ ಪುಟ್ಟ ದ್ವೀಪವಾಗಿದೆ.

ಗ್ರಾಂಸಿಯ ತಂದೆ ಸ್ಥಳೀಯ ನಾಗರಿಕ ಸೇವಕ, ಭ್ರಷ್ಟಾಚಾರದ ರಾಜಕೀಯ ಪ್ರೇರಿತ ಆರೋಪದ ಮೇಲೆ 1898ರಲ್ಲಿ ಅವರನ್ನು ಕೆಲಸದಿಂದ ಅಮಾನತುಗೊಳಿಸಲಾಯಿತು. ತನ್ನ ಕುಟುಂಬವನ್ನು ನಿರ್ವಹಿಸಲು ತಾಯಿಯು ಮಾಡುತ್ತಿದ್ದ ದರ್ಜಿಯ ಕೆಲಸದಿಂದ ಸಂಸಾರ ನಿರ್ವಹಿಸುವುದು ಕಷ್ಟವಾಗುತ್ತಿತ್ತು. ಇಂತಹ ಸಂದರ್ಭದಲ್ಲಿ ತನ್ನ ಕುಟುಂಬದ ಬೆಂಗಾವಲಾಗಿ ನಿಲ್ಲಲು ತನ್ನ ಶಾಲಾ ಶಿಕ್ಷಣವನ್ನು ಸಹ ಗ್ರಾಂಸಿಯು ಸ್ಥಗಿತಗೊಳಿಸಿದನು.

ಗ್ರಾಂಸಿಯು 12 ವರ್ಷದವನಿದ್ದಾಗ ಬಿಡುಗಡೆಯಾದರೂ ತನ್ನ ಕುಟುಂಬದ ಬಡತನ ಕಡಿಮೆಯಾಗಲಿಲ್ಲ. ನಾನು ಓದಲೇ ಬೇಕು ಎನ್ನುವ ಆತನ ಬಲವಾದ ಇಚ್ಛೆಯು ಆತನನ್ನು ಪ್ರೌಢಶಾಲೆಗೆ ಸೇರುವಂತೆ ಮಾಡಿತು. ಈ ಘಟನೆಯು ಅವನ ಜೀವನದಲ್ಲಿ ನಡೆದ ಮಹತ್ತರ ಹಂತ, ಏಕೆಂದರೆ ಅದೇ ಶಾಲೆಯಲ್ಲಿ ಅಧ್ಯಯನ ಮಾಡುತ್ತಿದ್ದ ಗ್ರಾಂಸಿಯ ಹಿರಿಯ ಸಹೋದರ ಗ್ರಾಂಸಿಯನ್ನು ಸಮಾಜವಾದಿ ಸಾಹಿತ್ಯಕ್ಕೆ ಪರಿಚಯಿಸಿ ಆ ಸಮಯದಲ್ಲೇ ಪ್ರಸಿದ್ಧ ಇಟಾಲಿಯನ್ ವಿಮರ್ಶಕರಾದ ಗೇಟಾನೋ ಸಾಲ್ವೆಮನಿ, ಗೈಸೆಪ್ಪ್ ಪ್ರಜೋಲಿನಿ, ಬೆನೆಡೆಟ್ಟೊ ಕ್ರೋಸ್ ಮತ್ತು ಕಾರ್ಲ್ ಮಾರ್ಕ್ಸ್‌ರಂತವರ ಅನೇಕ ಚಿಂತನೆಗಳನ್ನು ಗ್ರಾಂಸಿಗೆ ಅಧ್ಯಯನ ಮಾಡಲು ತಿಳಿಸಿದರು.

ಗ್ರಾಂಸಿಯ ಸಹೋದರ ಗೆನ್ನಾರೋ ಗ್ರಾಂಸಿಗೆ ಇಟಲಿಯ ಪ್ರಸಿದ್ದ ಸಮಾಜವಾದಿ ಪತ್ರಿಕೆ 'ಆವಂತಿ' ಯನ್ನು ಓದಲು ತರಿಸಿಕೊಡುತ್ತಿದ್ದ. ಗ್ರಾಂಸಿಯು ತನಗೆ ಸಿಗುತ್ತಿದ್ದ ವಿದ್ಯಾರ್ಥಿವೇತನದಲ್ಲೇ ಉತ್ತರ ಇಟಲಿಯ ಟೂರಿನ್ ವಿಶ್ವ ವಿದ್ಯಾಲಯ ಸೇರಿದ. ಈ ವಿಶ್ವ ವಿದ್ಯಾನಿಲಯದಲ್ಲಿ ಸಮಾಜವಾದಿ (ಕಮ್ಯೂನಿಸ್ಟ್) ಪಕ್ಷವನ್ನು ಕಟ್ಟಿ ಬೆಳೆಸಿದಂತಹ ಅನೇಕ ಸಮಾಜವಾದಿ ನಾಯಕರುಗಳು ಈತನಿಗೆ ಪರಿಚಯವಾದರೂ ತನ್ನ ಮನೆಯ ಬಡತನ ಹಾಗೂ ಅನಾರೋಗ್ಯದಿಂದ ವಿಶ್ವವಿದ್ಯಾಲಯದ ಶಿಕ್ಷಣವನ್ನು ಔಪಚಾರಿಕವಾಗಿ ಪೂರ್ಣಗೊಳಿಸಲು ಸಾಧ್ಯವಾಗಿಲ್ಲ.[1]

**1911 ಶಾಲಾ ಶಿಕ್ಷಣದಿಂದ ಟೂರಿನ್ ವಿಶ್ವವಿದ್ಯಾನಿಲಯದ ಕಡೆಗೆ**

1911 ರಲ್ಲಿ ಗ್ರಾಂಸಿಯು ಬಡ ವಿದ್ಯಾರ್ಥಿಗಳಿಗೆ ನೀಡುತ್ತಿದ್ದ ವಿದ್ಯಾರ್ಥಿ ವೇತನವನ್ನು ಬಳಸಿಕೊಂಡು ಆರಂಬಿಕ್ ಶಾಲಾ ಶಿಕ್ಷಣದಿಂದ ಆದಂತಹ ನಷ್ಟವನ್ನು ಮರುಪಡೆಯಲು ಯಶಸ್ವಿಯಾದರು. ಅದೇ ಸಮಯದಲ್ಲಿ ಭವಿಷ್ಯದ ವಿದ್ಯಾರ್ಥಿ ಸ್ನೇಹಿತ ಮತ್ತು

---

[1] Walter L.Adamson. (2014). *Hegemony and revolution Echo point books and Media*. Page No. 6 to 19

ಸಮಾಜವಾದಿ ಕಾರ್ಯಕರ್ತ ಸಾಲ್ಮಿರೋ ಟೂಗ್ಲಿಯಾಟ್ಟಿ ಪರಿಚಯವಾದರು.

ಅನಾರೋಗ್ಯ, ಅಪೌಷ್ಟಿಕತೆಯು ಗ್ರಾಂಸಿಯನ್ನು ತಾನು ಪಡೆಯುತ್ತಿದ್ದ ವಿದ್ಯಾರ್ಥಿ ವೇತನದಿಂದ ಪಾರುಮಾಡಲು ಸಾಧ್ಯವಾಗಲಿಲ್ಲ. ತೀವ್ರವಾಗಿ ಅಸ್ವಸ್ಥರಾಗಿ ಬಳಲುತ್ತಿದ್ದ ಅವರು ಅಂತಿಮವಾಗಿ ಅವರ ಪ್ರತಿಭೆಯ ಹೊರತಾಗಿಯೂ ವಿಶೇಷವಾಗಿ ಭಾಷಾಶಾಸ್ತ್ರಕ್ಕೆ ಸಂಬಂಧಿಸಿದಂತೆ ಮತ್ತು ಹಲವಾರು ಶಿಕ್ಷಕರ ಪ್ರೋತ್ಸಾಹದ ಹೊರತಾಗಿಯೂ ಅವರು ತಮ್ಮ ಅಧ್ಯಯನವನ್ನು ತ್ಯಜಿಸಬೇಕಾಗಿಯಿತು. ಈ ಘಟನೆಯು ಗ್ರಾಂಸಿಯು ರಾಜಕೀಯದಲ್ಲಿ ಬೆಳೆಯಲು ತನ್ನ ಬದ್ಧತೆಯನ್ನು ಹೆಚ್ಚಿಸಿತು.

## ಗ್ರಾಂಸಿಯ ಬೌದ್ಧಿಕ ರಚನೆ (Intellectual formation)

ಗ್ರಾಂಸಿಯು ಟ್ಯೂರಿನ್ ವಿಶ್ವವಿದ್ಯಾಲಯದಲ್ಲಿ ಕಳೆದ ವರ್ಷಗಳು ಹಾಗೂ ಆ ವಿಶ್ವವಿದ್ಯಾಲಯದಲ್ಲಿ ಅನೇಕ ಪ್ರಾಧ್ಯಾಪಕರು ಸಮಾಜವಾದಿ ಚಳುವಳಿಯೊಂದಿಗೆ ಗುರುತಿಸಿಕೊಂಡಿದ್ದರಿಂದ ಗ್ರಾಂಸಿಯ ಆ ಕಾಲದ ಬೌದ್ಧಿಕ ಪ್ರಪಂಚಕ್ಕೆ ಗಂಭೀರ ಸಂಪರ್ಕವನ್ನು ಒದಗಿಸಿಕೊಟ್ಟಿತು. ಈ ವಿಶ್ವವಿದ್ಯಾಲಯದಲ್ಲಿ ಗ್ರಾಂಸಿಗೆ ಪರಿಚಯವಾದ ಅಗ್ರಗಣ್ಯರೆಂದರೆ ಉಂಬರ್ಟೋಕಾಸ್ಮೋ ಹಾಗೂ ಅನಿಬೇಲ್ ಪಾಸ್ಟೋರ್ ಇಬ್ಬರೂ ಸಾಹಿತ್ಯಿಕ ಇತಿಹಾಸಕಾರರೂ ಹಾಗೂ ಡಾಂಟೆ ವಿದ್ವಾಂಸರೂ ಗ್ರಾಂಸಿಯ ಚಿಂತನೆಗಳ ಮೇಲೆ ಪ್ರಭಾವ ಬೀರಿದಂತಹ ಸಮಾಜವಾದಿಗಳು.[2]

ಈ ಸಮಯದಲ್ಲಿಯೇ ಗ್ರಾಂಸಿಯು 'ಫಿಲಾಸಫಿ ಆಫ್ ಪ್ರಾಕ್ಟಿಸ್' ಎಂಬ ಸಿದ್ಧಾಂಥವನ್ನು ರಚನೆಗೆ ತಂದರು. ಮೊದಲನೆಯ ಮಹಾಯುದ್ಧಕ್ಕೂ ಇಟಲಿಯಲ್ಲಿದ್ದ ಏಕೈಕ ಇಟಾಲಿಯನ್ ಮಾರ್ಕ್ಸ್‌ವಾದಿ ಸಿದ್ಧಾಂತಿ ಆಂಟೋನಿಯೋ ಲ್ಯಾಬ್ರಿಯಾಲಾರವರು 'ಫಿಲಾಸಫಿ ಆಫ್ ಪ್ರಾಕ್ಟಿಸ್' ಎಂಬ ಪದವನ್ನು ಇಟಲಿಯಲ್ಲಿ ಪರಿಚಯಿಸಿದವರು. ಒಬ್ಬ ದಾರ್ಶನಿಕ ಮತ್ತು ಇತಿಹಾಸಕಾರರಾಗಿದ್ದ ಲ್ಯಾಬ್ರಿಯೋಲಾರವರ ತಮ್ಮ ಜೀವನದ ಕೊನೆಯ ಘಟ್ಟದಲ್ಲಿ ಮಾರ್ಕ್ಸ್‌ವಾದ ಹಾಗೂ ಸಮಾಜವಾದಿ ಚಳುವಳಿಯಲ್ಲಿ ಭಾಗವಹಿಸುವ ಮೂಲಕ ತಡವಾಗಿ ಹೆಗೆಲಿಯನ್ ಭೌದ್ಧಿಕ ರಚನೆಯ ವಿಶಿಷ್ಟ ಕುರುಹುಗಳನ್ನು ಪರಿಚಯಿಸಿದರು.ಲ್ಯಾಬ್ರಿಯೋಲಾರವರ ಆಲೋಚನೆಗಳು ವಿಶೇಷವಾಗಿ ಇತಿಹಾಸದ ವ್ಯಾಖ್ಯಾನದ ಮೇಲೆ, ಬೌದ್ಧಿಕ ವಲಯಗಳ ಮೇಲೆ ಅತ್ಯಂತ ಪ್ರಭಾವಶಾಲಿಯಾಗಿದ್ದವು.

ನಿರ್ದಿಷ್ಟವಾಗಿ ಭೌತಿಕ ವಿರೋಧಿ ಪ್ರವೃತ್ತಿ ಪರಿಭಾಷೆಯನ್ನು ಗುರುತಿಸಿಕೊಂಡ 'ಫಿಲಾಸಫಿ ಆಫ್ ಪ್ರಾಕ್ಟಿಸ್' ಎಂಬ ಪದಗುಚ್ಛವನ್ನು ಪ್ರಮುಖವಾಗಿ ಪರಿಚಯಿದವರೆಂದರೆ ರೊಡಾಲ್ಫೋ ಮೊಂಡಾಲೋ ಮತ್ತು ಜಿಯೋವಾನಿ ಜೆಂಟೈಲ್ ಲ್ಯಾಬ್ರಿಯೋಲಾ ಸಾವಿನ ನಂತರ ಇಟಾಲಿಯನ್ ಸಮಾಜವಾದದ ಪ್ರಮುಖ ತತ್ವಜ್ಞಾನಿ ಎಂದರೆ ರೊಡಾಲ್ಫೋ ಮೊಂಡೋಲ್ಫೋ... 'ದ ಫಿಲಾಸಫಿ ಆಫ್ ಪ್ರಾಕ್ಟಿಸ್' ಎಂಬ ಸಿದ್ಧಾಂಥವು ಲ್ಯಾಬ್ರಿಯೋಲಾ, ಮೊಂಡಾಲ್ಫೋ ಮತ್ತು ಗ್ರಾಂಸಿ ಈ ಮೂರು ಚಿಂತಕರಲ್ಲಿ ಸಮನ್ವಯತೆಯಿದ್ದರಿಂದ ವಿಮರ್ಶಕರಲ್ಲಿ ಸಾಮಾನ್ಯ ಆದರ್ಶವಾದಿ ತತ್ವ ಪ್ರತಿಪಾದಿಸಲು ಕಾರಣವಾಯ್ತು.

## ಲಾ ಆರ್ಡಿನೋ ನೋವೋ (Ordine Nuovo) 'Red Years' and the founding of the P.C.I)

1919 ರ ಇದೇ ಸಮಯದಲ್ಲಿ ಗ್ರಾಂಸಿಯು, ಸೋಷಿಯಾಲಿಸ್ಟ್ ಪಕ್ಷದ ಎಡಪಂಥೀಯ ನಾಯಕರಾಗಿದ್ದ ಏಂಜಲೋ ಟಸ್ಕ್, ಪಾಲಿಮರೋ ತೊಗ್ಲಿಯಾಟ್ಟಿ, ಎಂಬರ್ಟೊ ಟೆರಾಸ್ಕನಿ ಇವರ ಜೊತೆ ಸೇರಿ "ಲಾ ಆರ್ಡಿನೋ ನೊಮೋ" (ಸಮಾಜವಾದಿ ಸಂಸ್ಕೃತಿಯ ವಿಮರ್ಶೆ) ಎಂಬ ಸಾಪ್ತಾಹಿಕವನ್ನು

[2] Walter L.Adamron. (2014). *A Study of Antonio Gramscis political and cultural theory*. Echo point Books and Media.

ಪ್ರಾರಂಭಿಸಿದ ಕೆಲವೇ ತಿಂಗಳಲ್ಲಿ ಈ ಪತ್ರಿಕೆಗೆ ಸು.6000 ಚಂದಾದಾರರಾದರು.

**ಆರಂಭಿಕ ಸಾಮಾಜೀಕರಣ**

ಗ್ರಾಂಸಿಯು ತನ್ನ ಶಿಕ್ಷಣವನ್ನು ಪೂರೈಸಲು ಅಸಾಧ್ಯವಾದರೂ ತಾನೂ ಹುಟ್ಟಿ ಬೆಳೆದು ಬಂದಂತಹ ಪುಟ್ಟ ದ್ವೀಪ ದಕ್ಷಿಣ ಪ್ರಾಂತ್ಯದಲ್ಲಿ ನೆಲೆಸಿರುವ ಸಾರ್ಡಿನಿಯದಲ್ಲಿನ ಜನರ ಬಡತನ, ಹಸಿವು, ದುಃಖ ದುಮ್ಮಾನಗಳ ಅನುಭವವೇ ಆತನು ಯವಕನಿದ್ದಾಗ ಪ್ರತ್ಯೇಕ ಸಾರ್ಡಿನಿಯಕ್ಕಾಗಿ ನಡೆಯುತ್ತಿದ್ದ ಹೋರಾಟಕ್ಕೆ ತನ್ನ ಬೆಂಬಲವನ್ನು ಸೂಚಿಸಿದ್ದನು. ಈ ಹಿನ್ನೆಲೆಯಲ್ಲಿ ಖ್ಯಾತ ವಿಮರ್ಶಕಾರರು ಹಾಗೂ ಕಮ್ಯೂನಿಸ್ಟ್ ಪಕ್ಷದ ಮಾರ್ಕ್ಸ್‌ವಾದವನ್ನು ಅತ್ಯಂತ ಸವಿಸ್ತಾರವಾಗಿ ಅಧ್ಯಯನ ಮಾಡಲು ಯೋಚಿಸಿದ ಗ್ರಾಂಸಿಯು ಸಾರ್ಡಿನಿಯಾದ ಪ್ರತ್ಯೇಕತೆಯನ್ನು ಬದಿಗಿಟ್ಟು ದಕ್ಷಿಣ ಇಟಲಿಯ ಸಮಸ್ಯೆಗಳತ್ತ ಗಮನವನ್ನು ಹರಿಸಿದನು.

ತನ್ನ ಪುಟ್ಟ ದ್ವೀಪ ಸಾರ್ಡೀನಿಯಾದಲ್ಲಿ ರೈತರಿಗೆ ಆಗುತ್ತಿದ್ದ ಅನ್ಯಾಯವನ್ನು ಮೂಲೆಗುಂಪು ಮಾಡಿ ಕೇವಲ ಉತ್ತರ ಇಟಲಿಯ ಕೈಗಾರಿಕೋದ್ಯಮಿಗಳು ಕಾರ್ಮಿಕರನ್ನು ಶೋಷಿಸುತ್ತಿದ್ದ ಶೋಷಣೆಯೇ ಸಮಗ್ರ ಇಟಲಿಯನ್ನರ ಶೋಷಣೆ ಎಂದು ಬಾವಿಸಿದ್ದು ಗ್ರಾಂಸಿಯು ತನ್ನ ಚಿಂತನೆಯ ಲಹರಿಯನ್ನು ಬದಲಾಯಿಸಲು ಕಾರಣವಾಗಿತ್ತು.

ಉತ್ತರ ಇಟಲಿಯ ಬೂರ್ಜ್ವಾಗಳು ದಕ್ಷಿಣ ಇಟಲಿ ಮತ್ತು ದ್ವೀಪಗಳನ್ನು ವಶಪಡಿಸಿಕೊಂಡು ವಸಾಹತುಗಳನ್ನಾಗಿ ಮಾಡಿಕೊಂಡು ಶೋಷಣೆಗೆ ಒಳಪಡಿಸಿದ್ದರಲ್ಲದೇ ಉತ್ತರ ಇಟಲಿಯನ್ನು ಬ್ಯಾಂಕ್ ಮತ್ತು ಬಂಡವಾಳಶಾಹಿಯಿಂದ ವಿಮೋಚನೆಗೊಳಿಸುವುದಾದರೆ ದಕ್ಷಿಣದ ರೈತರು ಉತ್ತರ ಇಟಲಿಯ ಬ್ಯಾಂಕ್ ಮತ್ತು ಕೈಗಾರಿಕಾ ಪರಾವಲಂಬಿತನದಿಂದ ಒಳಪಟ್ಟ ದಕ್ಷಿಣದ ರೈತ ಸಮಾಜವನ್ನು ವಿಮೋಚನೆ ಮಾಡುವುದು ಯಾವಾಗ? ಎಂದು ಗ್ರಾಂಸಿಯು ಪ್ರಶ್ನಿಸುತ್ತಾನೆ.

**ದಕ್ಷಿಣದ ಪ್ರಶ್ನೆಗಳು**

ಕೈಗಾರಿಕೋದ್ಯಮಶೀಲವಾದ ಉತ್ತರದ ಇಟಲಿ ಹಾಗೂ ಗ್ರಾಮೀಣ ರೈತರ ಭಾಗವಾದ ದಕ್ಷಿಣ ಇಟಲಿಯ ನಡುವೆ ಒಂದು ಸಮನ್ವಯತೆ ಸಾಧಿಸದ ಹೊರತು ಇಟಲಿಯಲ್ಲಿ ಕ್ರಾಂತಿಯು ಅಸಾಧ್ಯ ಎಂದು ಅರಿತ ಗ್ರಾಂಸಿ ಎರಡರ ಕಂದಕವನ್ನು ಕಡಿಮೆ ಮಾಡಲು ಬಯಸಿದ್ದನು.

ಸು. 1887 ರಿಂದ ಉತ್ತರದ ಇಟಲಿಯಲ್ಲಿ ಪ್ರಬಲ ಬೂರ್ಜ್ವಾ ರಾಜಕಾರಣಿ ಜಿಯೋವಾನಿ ಜಿಯೋಲಿಟ್ಟಿ ಅವರ ರಕ್ಷಣಾತ್ಮಕ ಹಿತಾಸಕ್ತಿಗಳಿಂದ ಬೆಳೆದ ಉತ್ತರ ಇಟಲಿಯು ವಿದೇಶಿಯ ಬಂಡವಾಳವನ್ನು ಹೊರಗಿಟ್ಟು ತನ್ನದೇ ಆದ ಪ್ರಾಬಲ್ಯವನ್ನು ದೇಶಿಯ ಮಾರುಕಟ್ಟೆಯಲ್ಲಿ ಪಡೆಯುವ ಸಂರಕ್ಷಣಾ ನೀತಿಯನ್ನು ಅನುಸರಿಸಿತು. ಆದರೆ ಈ ನಿರ್ಧಾರ ಸಾಂಸ್ಕೃತಿಕ ಇಟಲಿಯ ಮೇಲೆ ಬೀರಿದ ದುರಂತ ಪ್ರಭಾವ. ಏಕೆಂದರೆ ರೈತರು ತಮ್ಮ ಉತ್ಪನ್ನಗಳನ್ನು ರಫ್ತು ಮಾಡಲು ಸಾಧ್ಯವಾಗಲಿಲ್ಲ. ಅದೇ ಸಮಯದಲ್ಲಿ ಹೆಚ್ಚು ಮುಂದುವರೆದ ಕೈಗಾರಿಕಾ ದೇಶಗಳಲ್ಲಿ ತಯಾರಿಸಿದ್ದ ಹಗ್ಗದ ಉತ್ಪನ್ನಗಳನ್ನು ಇಟಲಿಯಲ್ಲಿ ಖರೀದಿಸಲು ಉತ್ತೇಜನ ನೀಡುವ ಬದಲು ಇಟಲಿಯನ್ ಉದ್ಯಮದ ಉತ್ಪನ್ನಗಳನ್ನು ಖರೀದಿಸಲು ಒತ್ತಾಯಿಸಲಾಯಿತು. ಇದು ಮುಂದೆ "ದಕ್ಷಿಣದ ಪ್ರಶ್ನೆಗಳು" ಎಂಬ ಹೊಸ ಸಿದ್ಧಾಂಥಕ್ಕೆ ನಾಂದಿಹಾಡಿತು. ಈ ಸಿದ್ಧಾಂಥದ ಪ್ರಮುಖ ಪ್ರಭಾವವೆಂದರೆ ದಕ್ಷಿಣ ಇಟಲಿ ಹಾಗೂ ದ್ವೀಪಗಳಲ್ಲಿ ಸಮಾಜವಾದದ ಹರಡುವಿಕೆ ಈ ಸಿದ್ಧಾಂಥವನ್ನು ಮೊದಲನೆಯ ಮಹಾಯುದ್ಧದಕ್ಕೂ ಹೆಚ್ಚು ಪ್ರಚಾರ ಮಾಡಿದ ಶ್ರೇಯ ಗೇಟಾನೋ ಸಾಲ್ವೆಮನಿ ಅವರಿಗೆ ಸಲ್ಲುತ್ತದೆ.[3]

1911 ರಲ್ಲಿ ಗ್ರಾಂಸಿಯು ಟೂರಿನ್‌ಗೆ ಆಗಮಿಸಿದ ಸಮಯದಲ್ಲೇ ಈ ದಕ್ಷಿಣವಾದ (Southernism)

[3]Antonio Gramsci. (2021). Selection from the prison note books, orient Blackswan Private Limited.

ತನ್ನ ವ್ಯಾಪಕತೆಯನ್ನು ಪಡೆದುಕೊಂಡಿತ್ತು. ಇದು ಗ್ರಾಂಸಿಯ ರಾಜಕೀಯ ಚಿಂತನಾ ಲಹರಿಯನ್ನು ಮತ್ತಷ್ಟು ಉತ್ತಮಪಡಿಸಿತು ಎಂಬುದರಲ್ಲಿ ಅತಿಶಯೋಕ್ತಿಯೇನಲ್ಲ.

## ಜೈಲು ಬರಹಗಳು (Prison note books)

ಇಟಾಲಿಯನ್ ಮಾರ್ಕ್ಸ್‌ವಾದಿ ಆಂಟೋನಿಯೋ ಗ್ರಾಂಸಿಯು 1948–1951 ರ ನಡುವೆ ಪ್ರಕಟವಾದ 2848 ಪುಟಗಳನ್ನು ಒಳಗೊಂಡಿರುವ ಒಂದು ಬೃಹತ್ ಸಂಕಲನವೇ ಗ್ರಾಂಸಿಯ ಈ 'ಪ್ರಿಸನ್ ನೋಟ್‌ಬುಕ್ 1926' ರಲ್ಲಿ ಮುಸಲೋನಿ ನೇತೃತ್ವದ ಫ್ಯಾಸಿಸ್ಟ್ ಸರ್ಕಾರವು ಗ್ರಾಂಸಿಯನ್ನು ಬಂಧಿಸಲಾಯಿತು. ಸು.1937ರ ವರೆಗೂ ಸೆರೆಮನೆಯಲ್ಲಿದ್ದ ಗ್ರಾಂಸಿಯು ತನ್ನ ಸೆರೆಮನೆ ವಾಸದಲ್ಲಿಯೇ 1929 ಮತ್ತು 1935 ರ ನಡುವೆ ತನ್ನ ಚಿಂತನೆಗಳನ್ನು ಜೈಲಿನ ಅಧಿಕಾರಿಗಳಿಗೆ ಗೊತ್ತಾಗದ ಹಾಗೆ ಗುಪ್ತ ಪದಗಳ ಮೂಲಕ ದಾಖಲಿಸಿದ ಬರವಣಿಗೆಗಳಾಗಿವೆ. ಗ್ರಾಂಸಿಯನ್ನು ಅನಾರೋಗ್ಯದ ಮೇಲೆ ಬಿಡುಗಡೆ ಮಾಡಿದಾಗ ಆತನ ನಿಕಟವರ್ತಿ ಪಿಯೆರೊ ಸ್ರಾಫಾ ಎಂಬಾತನು ಗ್ರಾಂಸಿಗೆ ಬರೆಯಲು ಬೇಕಾದಂತಹ ಉಪಕರಣಗಳು ಹಾಗೂ ನೋಟ್‌ಬುಕ್‌ಗಳನ್ನು ಪೂರೈಸಿದ್ದನು. ಗ್ರಾಂಸಿಯು ಸುಮಾರು 3000 ಪುಟಗಳ 30 ಕ್ಕೂ ಹೆಚ್ಚು ನೋಟ್‌ಬುಕ್‌ಗಳನ್ನು ತನ್ನ ಸೆರೆಮನೆವಾಸದಲ್ಲಿ ಬರೆದಿದ್ದಾರೆ ಎಂದು ಅಂದಾಜಿಸಲಾಗಿದೆ. ಈ ಪುಸ್ತಕಗಳು ವ್ಯವಸ್ಥಿತವಾಗಿ ಬರೆಯಲ್ಪಡದಿದ್ದರೂ ಇವು 20ನೇ ಶತಮಾನದ ರಾಜಕೀಯ ಸಿದ್ಧಾಂತಕ್ಕೆ ತಮ್ಮ ಅತ್ಯಮೂಲ್ಯ ಕೊಡುಗೆಯನ್ನು ನೀಡಿವೆ.[4]

ಗ್ರಾಂಸಿಯು ತನ್ನ ಚಿಂತನೆಗಳನ್ನು ರಾಜಕೀಯ ಸಿದ್ದಾಂಥಗಳನ್ನು ವ್ಯಕ್ತಪಡಿಸುವಾಗ ಕೇವಲ ಮಾರ್ಕ್ಸ್‌ವಾದಿ ಚಿಂತನೆಗಳು ಮಾತ್ರವಲ್ಲದೇ ಆ ಕಾಲಮಾನದ ಚಿಂತಕರಾದ ನಿಕೊಲೋ ಮ್ಯೊಕದಲ್ಲಿ ವಿಲ್ಪ್ರೆಡ್ ಸ್ಯಾರೆಟೋ, ಜಾರ್ಜಸ್ ಸೊರೆಲ್, ಮತ್ತು ಬೆನೆಡೆಟ್ಟೋ ಕೂಸ್ ರಂತಹ ವಿವಿಧ ಚಿಂತಕರ ಸಿದ್ಧಾಂತಗಳನ್ನು ಅಧ್ಯಯನ ಮಾಡಿ ವಿಶ್ಲೇಷಿಸಿದರು.

ಗ್ರಾಂಸಿಯವರ ಸೆರೆಮನೆ ವಾಸದ ಜೈಲುಬರಹಗಳಲ್ಲಿ ಇಟಲಿ ದೇಶದ ಸಂಸ್ಕೃತಿ ಮತ್ತು ರಾಷ್ಟ್ರೀಯತೆ, ಫ್ರಾನ್ಸಿನ ಕ್ರಾಂತಿ, ಫ್ಯಾಸಿಸಂ, ತೀಲರಿಸಂ ಮತ್ತು ಫೋರ್ಡಿಸಂ, ನಾಗರಿಕ ಸಮಾಜ, ಜಾನಪದ, ಧರ್ಮ, ಜನಪ್ರಿಯ ಸಂಸ್ಕೃತಿ ಸೇರಿದಂತೆ ವ್ಯಾಪಕ ಶ್ರೇಣಿಯ ವಿಷಯಗಳನ್ನು ಪ್ರಸ್ತಾಪಿಸಿದ್ದಾನೆ. ತನ್ನ ಜೈಲಿನ ಅದಿಕಾರಿಗಳಿಗೆ ಗೊತ್ತಾಗದೇ ಗ್ರಾಂಸಿಯು ಬೇರೆ ಕಡೆ ಸಾಗಿಸಿ ಮೊದಲ ಆವೃತಿಯನ್ನು ಗ್ರಾಂಸಿಯು ಮರಣ ಹೊಂದಿದ 10 ವರ್ಷಗಳ ನಂತರ 1947 ರಲ್ಲಿ ಪ್ರಕಟಿಸಲಾಯಿತು.

## ಯಜಮಾನಿಕೆ ಸಿದ್ಧಾಂತ

ಫ್ಯಾಸಿಸ್ಟ್ ಸರ್ಕಾರವು ನವೆಂಬರ್ 26, 1926 ರಂದು ಇಟಾಲಿಯನ್ ಕಮ್ಯುನಿಸ್ಟ್ ಪಕ್ಷದ ಕಾರ್ಯದರ್ಶಿಯಾದ ಆಂಟೊನಿಯೋ ಗ್ರಾಂಸಿಯನ್ನು 20 ವರ್ಷಗಳ ಸೆರೆಮನೆಯ ಶಿಕ್ಷೆಯನ್ನು ವಿಧಿಸಿತು. ಇಂತಹ ಕಠಿಣ ಸೆರೆಮನೆವಾಸದಲ್ಲಿಯೇ ಅವನ ಚಿಂತನೆಗಳಿಂದ ಮೂಡಿಬಂದಂತಹ ಇಪ್ಪತ್ತನೇ ಶತಮಾನದ ಮಾರ್ಕ್ಸಿಸ್ಟ್ ಚಿಂತನೆಯ ಒಂದು ಪರಿಕಲ್ಪನೆಯ ಕೊಡುಗೆಯೇ ಈ ಯಜಮಾನಿಕೆ / ಅಧಿಪತ್ಯ ಸಿದ್ದಾಂತ ("Theory of Hegemony") ದುರಾದೃಷ್ಟವಶಾತ್ ವ್ಯವಸ್ಥಿತವಾಗಿ ಈ ಸಿದ್ಧಾಂತವನ್ನು ವಿವರಿಸಲು ಅವನಿಗೆ ಸಾಧ್ಯವಾಗಲಿಲ್ಲ. ಶೋಚನೀಯವಾದ ಬಂಧನದ ಶಿಕ್ಷೆಯು 1937 ರಲ್ಲಿ ಅವನ ಸಾವಿಗೆ ಕಾರಣವಾಯ್ತು.

ಈ ಸಿದ್ಧಾಂತದ ಪ್ರಮೇಯ / ತಿರುಳು ಎಂದರೆ ಮನುಷ್ಯನು ಬಲದಿಂದ ಮಾತ್ರ ಆಳಲ್ಪಡುವುದಿಲ್ಲ, ಆದರೆ ಆಲೋಚನೆಗಳಿಂದಲೂ ಕೂಡ ಎಂಬುದು

[4] ವಿಜಯ ಪೂಣಚ್ಚ ತಂಬಂಡ. (2007). *ವರ್ಗದಿಂದ ಸಂಸ್ಕೃತಿಯಡೆಗೆ ಸಬಾಲ್ಟರನ್ ಅಧ್ಯಯನ.* ಪ್ರಸಾರಾಂಗ, ಕನ್ನಡ ವಿಶ್ವಾವಿದ್ಯಾಲಯ ಹಂಪಿ. ಪುಟ. 32 ಮತ್ತು 33.

ಮಾರ್ಕ್ಸ್ ಹೇಳುವ ಹಾಗೆ ಪ್ರತಿಯುಗದ ಆಳುವ ವಿಚಾರಗಳು ಅದರ ಆಡಳಿತ ವರ್ಗದ ಕಲ್ಪನೆಗಳಾಗಿವೆ. ಈ ಸರಳ ಸತ್ಯವನ್ನು ಗ್ರಾಂಸಿಯು ಮಾರ್ಕ್ಸ್‌ನಗಿಂತ ವಿಭಿನ್ನವಾಗಿ ಅರ್ಥಪೂರ್ಣವಾಗಿ ವಿಶ್ಲೇಷಿಸಿದ್ದಾನೆ.

ಗ್ರಾಂಸಿಯು ಸೂಚಿಸುವಂತೆ ಪ್ರಾಬಲ್ಯವು ಸೈದ್ಧಾಂತಿಕ ಅಥವಾ ಸಾಂಸ್ಕೃತಿಕ ವಿಧಾನಗಳ ಮೂಲಕ ನಿರ್ವಹಿಸಲ್ಪಡುವ ಪ್ರಾಬಲ್ಯ ಇದನ್ನು ಸಾಮಾನ್ಯವಾಗಿ ಸಾಮಾಜಿಕ ಸಂಸ್ಥೆಗಳ ಮೂಲಕ ಸಾಧಿಸುವಂತಹದ್ದಾಗಿದ್ದು, ಇದನ್ನು ಅಧಿಕಾರದಲ್ಲಿರುವವರು ಸಮಾಜದಲ್ಲಿನ ಸಾಮಾನ್ಯ ಜನರ ಮೌಲ್ಯಗಳು, ರೂಢಿಗಳು, ಕಲ್ಪನೆಗಳು, ನಿರೀಕ್ಷೆಗಳು, ನಡವಳಿಕೆಗಳ ಮೇಲೆ ತನ್ನದೇ ಆದ ಪ್ರಭಾವವನ್ನು ಬೀರುವವರಾಗಿರುತ್ತಾರೆ. ಇಂತಹ ಪ್ರಭಾವವನ್ನು ಬೀರಲು ತಮ್ಮ ಸಿದ್ಧಾಂತವನ್ನು ಸಮಾಜದಲ್ಲಿರುವ ಸಾಮಾಜಿಕ ಸಂಸ್ಥೆಗಳಾದ ಶಾಲೆ, ಚರ್ಚ್, ನ್ಯಾಯಾಲಯಗಳು ಮತ್ತು ಮಾಧ್ಯಮಗಳ ಮೂಲಕ ತಮ್ಮ ಒಪ್ಪಿಗೆಯನ್ನು ಸಾಧಿಸಲಾಗುತ್ತದೆ. ಈ ಸಂಸ್ಥೆಗಳು ಪ್ರಬಲ ಸಾಮಾಜಿಕ ಗುಂಪಿನ ರೂಢಿಗಳು, ಮೌಲ್ಯಗಳು ಮತ್ತು ನಂಬಿಕೆಗಳಿಗೆ ಜನರನ್ನು ಸಾಮಾಜಿಕಗೊಳಿಸುವ ಕೆಲಸವನ್ನು ಮಾಡುತ್ತವೆ.

ಗ್ರಾಂಸಿಯು ಹೇಳುವ ಹಾಗೆ ಪಟ್ಟಭದ್ರ ಹಿತಾಸಕ್ತಿಗಳು, ನಿರ್ದಿಷ್ಟವಾಗಿ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಆದೇಶಗಳನ್ನು ಹೊಂದಿರುವ ಜನರು ರಚಿಸುವುದಕ್ಕಿಂತ ಹೆಚ್ಚಾಗಿ ತಮ್ಮ ಸಮಾಜದ ಆರ್ಥಿಕ ಮತ್ತು ಸಾಮಾಜಿಕ ಸ್ವಾಭಾವಿಕ ಮತ್ತು ಅನಿವಾರ್ಯವೆಂದು ಪ್ರಬಲ ಗುಂಪಿನಿಂದ ಆಳಲ್ಪಟ್ಟವರು ನಂಬಿದಾಗ ಸಾಂಸ್ಕೃತಿಕ ಪ್ರಾಬಲ್ಯವು ಹೆಚ್ಚು ಬಲವಾಗಿ ಪ್ರಕಟವಾಗುತ್ತದೆ.

ಈ ಸಿದ್ಧಾಂತದ ಪ್ರಕಾರ ಪ್ರಾಬಲ್ಯ/ಯಜಮಾನಿಕೆ ಒಂದು ಸಾಂಸ್ಕೃತಿಕ ಪ್ರಕ್ರಿಯೆಯಾಗಿದ್ದು, ಅದರ ಮೂಲಕ ಒಂದು ವರ್ಗವು ಇನ್ನೊಂದು ವರ್ಗವನ್ನು ನಿಯಂತ್ರಿಸುತ್ತದೆ. ಹೀಗೆ ಪ್ರಾಬಲ್ಯವುಳ್ಳವರು ಅಧಿಕಾರದ ಮಂತ್ರವನ್ನು ಜಪಿಸುತ್ತಲೇ ಇರುತ್ತಾರೆ. ಹಾಗೇ ತಮ್ಮ ಅಧೀನದ ಜನರನ್ನು ತಮ್ಮನ್ನು ಪಾಲಿಸುವಂತೆ ಮಾಡುತ್ತಾರೆ. ಸರಳವಾಗಿ ಹೇಳುವುದಾದರೇ ಸಾಮಾನ್ಯರ ಕಿವಿಗೆ ಏನನ್ನಾದರೂ ಹಾಕುವುದು ಮತ್ತು ಅದನ್ನು ನಂಬುವಂತೆ ಮಾಡುವುದು'.

ಗ್ರಾಂಸಿಯ ಪ್ರಕಾರ ಸಮಾಜವನ್ನು ಬಲಪ್ರಯೋಗವಿಲ್ಲದೇ ಹೇಗೆ ನಿಯಂತ್ರಿಸುವ ಒಳ್ಳೆಯ ಭೂಮಿಕೆಯನ್ನು ಆಳುವ ವರ್ಗಗಳು ನಿರ್ಮಿಸಿಕೊಳ್ಳುವ ಮಾರ್ಗಗಳನ್ನು ಕೆಳಕಂಡಂತೆ ವಿವರಿಸಿದ್ದಾರೆ. ಒಂದು ವರ್ಗದ ಪ್ರಾಬಲ್ಯವನ್ನು ಮುರಿದು ಹೊಸ ಆಳುವ ವರ್ಗ ಉಚ್ಚ್ರಾಯಕ್ಕೆ ಬರುವಾಗ ಹಳೆಯ ಸಾಮಾಜಿಕ ವ್ಯವಸ್ಥೆಯಲ್ಲಿ ನಿರ್ಣಾಯಕ ಬದಲಾವಣೆಗಳನ್ನು ಉಂಟುಮಾಡುತ್ತದೆ ಎನ್ನುವುದು ನಿಜ ಆದರೆ ಹೊಸ ಆಳುವ ವರ್ಗಗಳು ಹಳೆಯ ವ್ಯವಸ್ಥೆಯನ್ನು ಸಂಪೂರ್ಣವಾಗಿ ನಾಶಮಾಡದೇ ಮೇಲ್ನೋಟಕ್ಕೆ ನಿಷ್ಪಕ್ಷಪಾತಿಯಾಗಿ ಕಾಣುವ ಮತ್ತು ಜನರ ವಿಶ್ವಾಸಗಳಿಸಿಕೊಂಡಿರುವ ಹಳೆಯ ವ್ಯವಸ್ಥೆಯಲ್ಲಿನ ಕೆಲವು ಸಂಸ್ಥೆಗಳು ಹಾಗೂ ನೈತಿಕ ಮೌಲ್ಯಗಳನ್ನು ಹೊಸ ಆಳುವ ವರ್ಗಗಳು, ಜತನದಿಂದ ಪೋಷಿಸುತ್ತವೆ.[5] ಉದಾ: ಅರಸರು ಮತ್ತು ಭೂ ಮಾಲೀಕರು ತಮ್ಮ ಆಡಳಿತಕ್ಕೆ ಪೂರಕವಲ್ಲದ ಧಾರ್ಮಿಕ ಸಂಸ್ಥೆಗಳಿಗೆ ಅಗ್ರಹಾರಗಳಿಗೆ ಬೆಂಬಲ ನೀಡುವ ಮೂಲಕ ರಾಜನೇ ದೇವರು ಎಂಬ ದೈವಿಕ ಸಿದ್ಧಾಂತವನ್ನು ನಾವು ನೋಡಿದ್ದೇವೆ. ಆಳುವ ವರ್ಗಗಳು ಸಾಮಾಜಿಕ ಉತ್ಪಾದನೆಯನ್ನು ಶಿಸ್ತುಬದ್ಧಗೊಳಿಸಿ ಜನರಿಗೆ ಜೀವನಾವಶ್ಯಕ ಸೌಕರ್ಯಗಳನ್ನು ಒದಗಿಸಿ ಲೌಕಿಕ ಜೀವನ ಹೆಚ್ಚು ಸುಖದಾಯಕಗೊಳಿಸುವ ಸಕ್ಷಮ ನಾಯಕನ ಪಾತ್ರವನ್ನು ತಾನು ನಿರ್ವಹಿಸುತ್ತಿರುವುದಾಗಿ ಘೋಷಿಸಿಕೊಳ್ಳುತ್ತವೆ.

[5] Ranjitha Guha.(2000). *A Subaltern studies reader*. Oxford University Press-2000.

ಗ್ರಾಂಸಿಯು ಹೇಳುವ ಹಾಗೆ ಯಾವುದೇ ವರ್ಗದ ಶಕ್ತಿ ಸಮಾಜದಲ್ಲಿ ಅದು ಗಳಿಸಿಕೊಂಡಿರುವ ಯಜಮಾನಿಕೆಯನ್ನು ಅವಲಂಬಿಸಿರುತ್ತದೆ. ಪ್ರಭುತ್ವವನ್ನು ವಶಪಡಿಸಿಕೊಂಡು, ಉತ್ಪಾದನಾ ವ್ಯವಸ್ಥೆಯನ್ನು ಬದಲಿಸುವ ಮೂಲಕ ಆಳುವ ವರ್ಗದ ಶಕ್ತಿಯೇನೋ ಕುಂದಿಸಬಹುದು. ಅಷ್ಟು ಮಾತ್ರಕ್ಕೆ ಆ ವರ್ಗದ ಯಜಮಾನಿಕೆ ಸಂಪೂರ್ಣ ನಾಶವಾಗುವುದಿಲ್ಲ. ಆಳುವ ವರ್ಗದ ಹಿಂದೆ ಹಲವು ನಮೂನೆಯ ಮೌಲ್ಯಗಳು ಕಾಲಾಭಾದಿತವಾಗಿರುವಂತೆ ತೋರುವ ಸಂಸ್ಥೆಗಳು ಕೆಲಸ ಮಾಡುತಿರುತ್ತವೆ.

**ಪ್ರತಿಯಜಮಾನಿಕೆ**

ಪ್ರಭುತ್ವವನ್ನು ಹಿಡಿಯುವ ರಾಜಕೀಯದ ಜೊತೆ ನಾಗರಿಕ ಸಮಾಜದಲ್ಲಿ ಹೊಸ ನೈತಿಕ ನಾಯಕತ್ವವನ್ನು ರೂಢಿಸುವ ರಾಜಕೀಯವನ್ನು ಹೆಣೆದು ಪ್ರತಿಯಜಮಾನಿಕೆ[6] (counter Hegemony) ಯನ್ನು ಸ್ಥಾಪಿಸಬೇಕು ಎಂದು ಗ್ರಾಂಸಿಯು ಅಭಿಪ್ರಾಯ ಪಟ್ಟಿದ್ದಾನೆ. ನಿತ್ಯದ ಬದುಕಿನ ವ್ಯವಹಾರದಲ್ಲಿಯೇ ಪ್ರತಿಯಜಮಾನಿಕೆಗೆ ಅವಕಾಶಗಳನ್ನು ಕಂಡುಕೊಳ್ಳಬಹುದು. ಉದಾ:- ಮಹಾತ್ಮಗಾಂಧೀಜಿಯವರು ನಿತ್ಯ ಬಳಕೆಯ ಉಪ್ಪನ್ನು ವಸಾಹತುಶಾಹಿಯ ಯಜಮಾನಿಕೆಗೆ ಸವಾಲು ಹಾಕಲಿಕ್ಕೆ ಉಪಯೋಗಿಸಿಕೊಂಡಿದ್ದು, ಬಾಬಾ ಸಾಹೇಬ್‌ರು ಶೋಷಿತ ವರ್ಗದವರಿಗೆ ಅತ್ಯವಶ್ಯಕವಾದ ನೀರನ್ನು ಅವರಿಗೆ ದೊರಕಿಸಿ ಕೊಡುವ ಮೂಲಕ ಮೇಲ್ಜಾತಿ ಜನರ ಯಜಮಾನಿಕೆಯನ್ನು ಮೆಟ್ಟಿ ನಿಂತಿದ್ದು, ಹೀಗೆ ಪ್ರತಿ ಯಜಮಾನಿಕೆಯನ್ನು ಕಟ್ಟುವ ಹೋರಾಟಕ್ಕೆ ಅತ್ಯುತ್ತಮ ನಿದರ್ಶನಗಳು.

ಪ್ರತಿ ಯಜಮಾನಿಕೆಯನ್ನು ಕಟ್ಟುವುದು ಎಂದರೆ ಗ್ರಾಂಸಿಯ ಚಿಂತನೆಗಳಲ್ಲಿ ನಿರೂಪಿತವಾಗಿರುವ ಹಾಗೆ ಅಸ್ತಿತ್ವದಲ್ಲಿ ಇರುವ ಅಧಿಕಾರಸ್ಥ ವ್ಯವಸ್ಥೆಗೆ ಉತ್ತರವಾಗಿ ಮತ್ತೊಂದು ಅಧಿಕಾರಸ್ಥ ವ್ಯವಸ್ಥೆಯನ್ನು ಕಟ್ಟುವುದಲ್ಲ. ಇದು ಸಮಾಜವಾದದ ಮೂಲ ಉದ್ದೇಶವೂ ಅಲ್ಲ. ನಿತ್ಯ ಬದುಕಿನಲ್ಲಿ ರೂಢಿಗತವಾಗಿರುವ ಯಜಮಾನ ಮೌಲ್ಯಗಳ ಪ್ರಭಾವವನ್ನು ಕರಗಿಸಿ ಸಮಾನ ಸಾಮುದಾಯಿಕ ಬದುಕಿನ ಮೌಲ್ಯಗಳನ್ನು ಜನ ಕಂಡುಕೊಳ್ಳುವಂತಹ ವಾತಾವರಣವನ್ನು ನಿರ್ಮಿಸುವುದು.

ಗ್ರಾಂಸಿಯು ಹೇಳುವ ಹಾಗೆ ಜನರು ತಮ್ಮ ದಿನನಿತ್ಯದ ಬದುಕಿನ ಅನುಭವಗಳ ಮೂಲಕವೇ ಪ್ರಭುತ್ವ ನಿರೂಪಿಸುವ ಭ್ರಾಮಕ ಸಮುದಾಯದ ದರ್ಶನ ಪಡೆದು ಹೊಸ ಸಾಮುದಾಯಿಕ ಬದುಕಿನ ವ್ಯಾಕರಣವನ್ನು ಕಟ್ಟಿಕೊಳ್ಳುವಂತೆ ಮಾಡುವ ಹೋರಾಟಗಳು ಮಾತ್ರ ಆಳುವ ವರ್ಗಗಳು ಪ್ರಭುತ್ವ ಮತ್ತು ನಾಗರಿಕ ಸಮಾಜಗಳ ಮೇಲೆ ಹೊಂದಿರುವ ಪ್ರಭಾವ (ಯಜಮಾನಿಕೆ)ವನ್ನು ಏಕ ಕಾಲದಲ್ಲಿ ಎದುರಿಸುವ ಯಶಸ್ವಿ ಹೋರಾಟಗಳಾಗಬಲ್ಲವು.

ಸಾಮಾನ್ಯ ಜನರ ಲೋಕ ಜೀವನದ ಅನುಭವವನ್ನು ಉಪಯೋಗಿಸಿಕೊಂಡೆ ಅಧಿಕಾರಸ್ಥ ವ್ಯವಸ್ಥೆಯ ದರ್ಶನ ಮಾಡಿಸುವಂತಹ ವಿಚಾರಗಳು, ಜನರಿಗೆ ತಮ್ಮ ದಿನನಿತ್ಯದ ಬದುಕಿನಿಂದಲೇ ಆಳುವ ವರ್ಗಗಳ ಅಧಿಕಾರವನ್ನು ಎದುರಿಸುವ ವಿಶ್ವಾಸವನ್ನು ತಂದುಕೊಡುತ್ತವೆ.

ಈ ರೀತಿಯ ವಿಚಾರಗಳನ್ನು ತನ್ನ ಚೇತನವನ್ನಾಗಿ ಮಾಡಿಕೊಂಡ ಹೋರಾಟಗಳನ್ನು ಜನ ಸಾಮಾನ್ಯರು ಇದು ತಮ್ಮ ಬದುಕಿನ ಭಾಗವೇ ಆಗಿದೆ ಎನ್ನುವ ರೀತಿಯಲ್ಲಿ ಬೆಂಬಲಿಸುತ್ತಾರೆ. ಈ ನಮೂನೆಯ ವಿಚಾರ ಮತ್ತು ಹೋರಾಟಗಳನ್ನು ಗ್ರಾಂಸಿಯು ಲೋಕಾನುಭವದಿಂದ ಮಾಡಿದ ಜನಪ್ರಿಯ (National Popular) ವಿಚಾರ ಹೋರಾಟಗಳು ಎಂದು ಕರೆಯುತ್ತಾರೆ.

ಗ್ರಾಂಸಿಯು ಮಾರ್ಕ್ಸ್‌ವಾದದ ಉತ್ಪಾದನಾ ಸಂಬಂಧಗಳ ಪ್ರಾಮುಖ್ಯತೆ ಹಾಗೂ ಅಡಿಪಾಯ

[6] ರಹಮೆತ್ ತರೀಕರೆ, ಪ್ರತಿ ಸಂಸ್ಕೃತಿ, ಪ್ರಕಟಣೆ ಅಭಿನವ ಮಾರೇನಹಳ್ಳಿ ವಿಜಯನಗರ, ಬೆಂಗಳೂರು-560040-2017.

ಮೇಲುಕಟ್ಟಡಗಳ ಸ್ಥೂಲ ಚಿತ್ರಣವನ್ನು ಒಪ್ಪಿಕೊಂಡವನು ಹಾಗೆಯೇ ಸಮಾಜವಾದಿ ಕ್ರಾಂತಿ ಪ್ರಭುತ್ವದ ಮೇಲೆ ಪ್ರಾಬಲ್ಯ ಸ್ಥಾಪಿಸಬೇಕು ಎನ್ನುವುದನ್ನು ಅವನು ನಿರಾಕರಿಸುವುದಿಲ್ಲ. ಗ್ರಾಂಸಿಯ ಪ್ರಕಾರ ಆರ್ಥಿಕ ಸಂಬಂದಗಳು ಪ್ರಭುತ್ವ ಹಾಗೂ ನಾಗರಿಕ ಸಮಾಜದ ಜೊತೆ ಜೀವಂತ ಸಂಬಂದ ಹೊಂದಿರುತ್ತವೆ.

ಹುಟ್ಟುತ್ತಲೇ ಎಲ್ಲರೂ ಸಮಾನರು ಆದರೆ ಯಾರಿಗೆ ಸಾಧನೆಯ ಸಾಮರ್ಥ್ಯ ಇರುತ್ತದೋ ಅವರು ಸಮಾಜದಲ್ಲಿ ಉನ್ನತಿ ಸಾಧಿಸುತ್ತಾರೆ ಎನ್ನುವ ಸಿದ್ದಾಂಥವನ್ನು ಚಾಲ್ತಿಗೆ ತಂದವರೇ ಬಂಡವಾಳಶಾಹಿಗಳು ಈ ಚಾರಿತ್ರಿಕ ಸನ್ನಿವೇಶವನ್ನು ಗಮನಿಸಿ ಗ್ರಾಂಸಿ ಪ್ರಭುತ್ವವನ್ನು ವ್ಯಾಖ್ಯಾನಿಸಿದ ಗ್ರಾಂಸಿಯ ಪ್ರಕಾರ ಸಮಾಜದ ಪ್ರತಿಯೊಂದು ವರ್ಗಕ್ಕೂ ತನ್ನ ವರ್ಗಹಿತಾಸಕ್ತಿಯನ್ನು ಸಾರ್ವಜನಿಕ ಹಿತಾಸಕ್ತಿಯ ಪರಿಭಾಷೆಯಲ್ಲಿ ಜಾರಿಗೆ ತರುವ ವಿಶೇಷ ಕಾರ್ಯಪಡೆಯನ್ನು ತಯಾರು ಮಾಡುವುದು ತೀರಾ ಅವಶ್ಯಕವಾಗಿರುತ್ತದೆ.[7] ಅಂದರೆ ಆಧುನಿಕ ಸಮಾಜದಲ್ಲಿ ಪ್ರಸ್ತುತ ರಾಜಕೀಯ ಪಕ್ಷಗಳು ಇಂತಹ ಕಾರ್ಯಪಡೆಗಳಾಗಿರುತ್ತವೆ. ಪ್ರಭುತ್ವ ಈ ರಾಜಕೀಯ ಪಕ್ಷಗಳು ಕಾರ್ಯನಿರ್ವಹಿಸುವ ರಾಜಕೀಯ ಸಮಾಜವಾಗಿದೆ. ರಾಜಕೀಯ ಪಕ್ಷಗಳು ಮೇಲ್ನೋಟಕ್ಕೆ ವರ್ಗ ಬೇಧವಿಲ್ಲದೇ ಎಲ್ಲಾ ಜನರನ್ನು ಪ್ರತಿನಿಧಿಸುವ ಹಾಗೆ ಕಾಣುತ್ತವೆ. ತನ್ನ ವರ್ಗಕ್ಕೆ ಪ್ರಿಯವಲ್ಲದ, ಆದರೆ ಸಾರ್ವಜನಿಕ ಹಿತಕ್ಕೆ ಅತಿ ಅವಶ್ಯಕ ಎಂದು ಜನಮನ್ನಣೆ ಗಳಿಸಿರುವ ಕಾರ್ಯಕ್ರಮವನ್ನು ರಾಜಕೀಯ ಪಕ್ಷಗಳು ತಮ್ಮ ಪ್ರಣಾಳಿಕೆಯಲ್ಲಿ ಅಳವಡಿಸಿಕೊಳ್ಳುತ್ತವೆ. ಆದರೆ ಪಕ್ಷಗಳು ತಮ್ಮ ವರ್ಗದ ಮೂಲ ದೃಷ್ಟಿಕೋನವನ್ನು ಎಂದೂ ಬಿಟ್ಟುಕೊಡುವುದಿಲ್ಲ.

ಈ ರೀತಿ ರಾಜಕೀಯ ಪಕ್ಷಗಳು ಒಂದು ಕಡೆ ಸಮಾಜದ ಮೇಲೆ ತನ್ನ ವರ್ಗದ ಸರ್ವಾಧಿಕಾರವನ್ನು ಸ್ಥಾಪಿಸುವ, ಮತ್ತೊಂದು ಕಡೆ ತನ್ನ ವರ್ಗದ ನಾಯಕತ್ವಕ್ಕೆ ಸಮಾಜದಲ್ಲಿ ಜನಮನ್ನಣೆ ತಂದುಕೊಡುವ ರೀತಿಯಲ್ಲಿ ಪ್ರಭುತ್ವವನ್ನು ರೂಪಿಸುವ ಜವಾಬ್ದಾರಿಯನ್ನು ನಿರ್ವಹಿಸುತ್ತವೆ ಎಂದು ಗ್ರಾಂಸಿಯು ವಿಶ್ಲೇಷಿಸಿದ್ದಾನೆ.

**ರಾಜ್ಯ ಮತ್ತು ನಾಗರಿಕ ಸಮಾಜ**

ಗ್ರಾಂಸಿಯ ಪ್ರಾಬಲ್ಯದ ಸಿದ್ಧಾಂತವು ಬಂಡವಾಳಶಾಹಿ ರಾಜ್ಯದ ಪರಿಕಲ್ಪನೆಯೊಂದಿಗೆ ಸಂಬಂಧ ಹೊಂದಿದೆ, ಅವರು ಬಲ ಮತ್ತು ಒಪ್ಪಿಗೆಯ ಮೂಲಕ ನಿಯಮಗಳನ್ನು ಪ್ರತಿಪಾದಿಸುತ್ತಾರೆ. ರಾಜ್ಯವನ್ನು ಸರ್ಕಾರದ ಸಂಕುಚಿತ ಅರ್ಥದಲ್ಲಿ ಅರ್ಥಮಾಡಿಕೊಳ್ಳಬಾರದು, ಬದಲಿಗೆ ಗ್ರಾಂಸಿ ಇದನ್ನು ರಾಜಕೀಯ ಸಂಸ್ಥೆಗಳು ಮತ್ತು ಕಾನೂನು ಸಾಂವಿಧಾನಿಕ ನಿಯಂತ್ರಣದ ಅಖಾಡವಾಗಿರುವ ರಾಜಕೀಯ ಸಮಾಜ ಮತ್ತು ನಾಗರಿಕ ಸಮಾಜದ ನಡುವೆ ವಿಭಜಿಸುತ್ತಾನೆ ಇದು ಸಾಮಾನ್ಯವಾಗಿ ಖಾಸಗಿ ಅಥವಾ ರಾಜ್ಯವಲ್ಲದ ಕ್ಷೇತ್ರವಾಗಿ ಕಂಡುಬರುತ್ತದೆ. ಇದು ರಾಜ್ಯ ಮತ್ತು ಅರ್ಥಿಕತೆ ಎರಡರಿಂದಲೂ ಭಿನ್ನವಾಗಿದೆ. ಮೊದಲನೆಯದು ಬಲದ ಕ್ಷೇತ್ರ ಮತ್ತು ಎರಡನೆಯದು ಒಪ್ಪಿಗೆ. ಆದಾಗ್ಯೂ, ವಿಭಜನೆಯು ಸಂಪೂರ್ಣವಾಗಿ ಪರಿಕಲ್ಪನೆಯಾಗಿದೆ ಮತ್ತು ವಾಸ್ತವದಲ್ಲಿ ಎರಡು ಹೆಚ್ಚಾಗಿ ಅತಿಕ್ರಮಿಸುತ್ತದೆ ಎಂದು ಅವರು ಒತ್ತಿಹೇಳುತ್ತಾರೆ.

ಆಧುನಿಕ ಬಂಡವಾಳಶಾಹಿಯ ಅಡಿಯಲ್ಲಿ ಪ್ರಾಬಲ್ಯವಿದೆ ಎಂದು ಗ್ರಾಂಸಿ ಪ್ರತಿಪಾದಿಸುತ್ತಾನೆ ಮತ್ತು ನಾಗರಿಕ ಸಮಾಜದೊಳಗಿನ ಕಾರ್ಮಿಕ ಸಂಘಗಳು ಮತ್ತು ಸಾಮೂಹಿಕ ರಾಜಕೀಯ ಪಕ್ಷಗಳು ಮಾಡಿದ ಕೆಲವು ಬೇಡಿಕೆಗಳನ್ನು ರಾಜಕೀಯ ಕ್ಷೇತ್ರದಿಂದ ಪೂರೈಸಲು ಅನುಮತಿಸುವ ಮೂಲಕ ಬೂರ್ಜ್ವಾ ತನ್ನ ಆರ್ಥಿಕ ನಿಯಂತ್ರಣವನ್ನು ಉಳಿಸಿಕೊಳ್ಳಬಹುದು. ಹೀಗಾಗಿ ಬೂರ್ಜ್ವಾ ತನ್ನ

[7] ಮೇಟಿ ಮಲ್ಲಿಕಾರ್ಜುನ (ಪ್ರ.ಸಂ.) *ಕರ್ನಾಟಕ ಸಬಾಲ್ಟರನ್ ಓದು ಮಾಲಿಕೆ ಸಂಪುಟ–01 ತಾತ್ವಿಕತೆ.* ಕರ್ನಾಟಕ ಸಾಹಿತ್ಯ ಅಕಾಡೆಮಿ.

ತಕ್ಷಣದ ಆರ್ಥಿಕ ಹಿತಾಸಕ್ತಿಗಳನ್ನು ಮೀರಿ ತನ್ನ ಪ್ರಾಬಲ್ಯದ ಸ್ವರೂಪಗಳನ್ನು ಬದಲಾಯಿಸುವ ಮೂಲಕ ನಿಷ್ಕ್ರೀಯ ಕ್ರಾಂತಿಯಲ್ಲಿ ತೊಡಗುತ್ತದೆ. (ಸುಧಾರಣಾವಾದ ಮತ್ತು ಫ್ಯಾಸಿಸಂ ಹಾಗೆಯೇ ವೈಜ್ಞಾನಿಕ ನಿರ್ವಹಣೆ ಮತ್ತು ಅನುಕ್ರಮವಾಗಿ ಫ್ರೆಡೆರಿಕ್ ಟೇಲರ್ ಮತ್ತು ಹೆನ್ರಿ ಫೋರ್ಡ್‌ರ ಅಸೆಂಬ್ಲಿ ಲೈನ್ ವಿಧಾನಗಳು ಇದಕ್ಕೆ ಉದಾಹರಣೆಗಳಾಗಿವೆ ಎಂದು ಗ್ರಾಂಸಿ ಅಭಿಪ್ರಾಯಪಟ್ಟಿದ್ದಾರೆ).

ಮ್ಯಾಕಿಯಾವೆಲ್ಲಿಯಿಂದ ಚಿತ್ರಿಸುತ್ತಾ, ಆಧುನಿಕ ಕ್ರಾಂತಿಕಾರಿ, ಪಕ್ಷ–ಕಾರ್ಮಿಕ ವರ್ಗವು ಸಾವಯವ ಬುದ್ಧಿಜೀವಿಗಳನ್ನು ಮತ್ತು ನಾಗರಿಕ ಸಮಾಜದೊಳಗೆ ಪರ್ಯಾಯ ಪ್ರಾಬಲ್ಯವನ್ನು ಅಭಿವೃದ್ಧಿಪಡಿಸಲು ಅನುವು ಮಾಡಿಕೊಡುವ ಶಕ್ತಿಯಾಗಿದೆ ಎಂದು ಅವರು ವಾದಿಸುತ್ತಾರೆ. ಗ್ರಾಂಸಿಗೆ ಆಧುನಿಕ ನಾಗರಿಕ ಸಮಾಜದ ಸಂಕೀರ್ಣ ಸ್ವರೂಪ ಎಂದರೆ ಬೂರ್ಜ್ವಾ ಪ್ರಾಬಲ್ಯವನ್ನು ದುರ್ಬಲಗೊಳಿಸುವ ಮತ್ತು ಸಮಾಜವಾದಕ್ಕೆ ಕಾರಣವಾಗುವ ಏಕೈಕ ತಂತ್ರವೆಂದರೆ ಸ್ಥಾನದ ಯುದ್ಧ (ಕಂದಕ ಯುದ್ಧಕ್ಕೆ ಸದೃಶ್ಯವಾಗಿದೆ) ಈ ಸ್ಥಾನದ ಯುದ್ಧವು ನಂತರ ಚಳುವಳಿಯ ಯುದ್ಧಕ್ಕೆ (ಅಥವ ಮುಂಭಾಗದ ದಾಳಿ) ದಾರಿ ಮಾಡಿಕೊಡುತ್ತದೆ. ಗ್ರಾಂಸಿಯು ರಷ್ಯಾದ ಕ್ರಾಂತಿಯ ಸಮಯದಲ್ಲಿ ಚಳಿಗಾಲದ ಅರಮನೆಯ ಬಿರುಗಾಳಿಯಿಂದ ಉದಾಹರಣೆಯಾಗಿ ಚಳುವಳಿಯ ಯುದ್ದವನ್ನು ಕಂಡರು.

ಎರಡರ ನಡುವಿನ ಗೆರೆಗಳು ಅಸ್ಪಷ್ಟವಾಗಿರಬಹುದು ಎಂಬ ಅವರ ಹೇಳಿಕೆಯ ಹೊರತಾಗಿಯೂ, ಜಾಕೋಬಿನ್ಸ್ ಮತ್ತು ಫ್ಯಾಸಿಸ್ಟ್‌ಗಳು ಮಾಡಿದಂತೆ, ರಾಜಕೀಯ ಸಮಾಜವನ್ನು ನಾಗರಿಕ ಸಮಾಜದೊಂದಿಗೆ ಗುರುತಿಸುವುದರಿಂದ ಉಂಟಾಗುವ ರಾಜ್ಯ ಆರಾಧನೆಯನ್ನು ಗ್ರಾಂಸಿ ತಿರಸ್ಕರಿಸುತ್ತಾನೆ ನಿಯಂತ್ರಿತ ಸಮಾಜವನ್ನು ರಚಿಸುವುದು ಶ್ರಮಜೀವಿಗಳ ಐತಿಹಾಸಿಕ ಕಾರ್ಯವಾಗಿದೆ ಎಂದು ಅವರು ನಂಬುತ್ತಾರೆ ಮತ್ತು ರಾಜ್ಯದ ಕ್ಷೀಣಿಸುವಿಕೆಯನ್ನು ಸ್ವತಃ ನಿಯಂತ್ರಿಸುವ ನಾಗರಿಕ ಸಮಾಜದ ಸಾಮರ್ಥ್ಯದ ಸಂಪೂರ್ಣ ಬೆಳವಣಿಗೆ ಎಂದು ಪ್ರತಿಪಾದಿಸುತ್ತಾರೆ.

**ಬುದ್ಧಿಜೀವಿಗಳು ಮತ್ತು ಶಿಕ್ಷಣ**

ಸಮಾಜದಲ್ಲಿ ಬುದ್ಧಿಜೀವಿಗಳ ಪಾತ್ರದ ಪ್ರಶ್ನೆಗೆ ಗ್ರಾಂಸಿ ಹೆಚ್ಚು ಚಿಂತನೆ ನಡೆಸಿದರು. ಪ್ರಸಿದ್ಧವಾಗಿ ಅವರು ಎಲ್ಲಾ ಪುರುಷರು ಬುದ್ಧಿಜೀವಿಗಳು ಎಂದು ಹೇಳಿದ್ದಾರೆ. ಅದರಲ್ಲಿ ಎಲ್ಲರೂ ಬೌದ್ಧಿಕ ಮತ್ತು ತರ್ಕಬದ್ಧ ಸಾಮರ್ಥ್ಯಗಳನ್ನು ಹೊಂದಿದ್ದಾರೆ. ಆದರೆ ಎಲ್ಲಾ ಪುರುಷರು ಬುದ್ಧಿಜೀವಿಗಳ ಸಾಮಾಜಿಕ ಕಾರ್ಯವನ್ನು ಹೊಂದಿರುವುದಿಲ್ಲ. ಆಧುನಿಕ ಬುದ್ಧಿಜೀವಿಗಳು ಕೇವಲ ಮಾತನಾಡುವವರಲ್ಲ. ಆದರೆ ಶಿಕ್ಷಣ ಮತ್ತು ಮಾಧ್ಯಮದಂತಹ ಸೈದ್ಧಾಂತಿಕ ಸಾಧನಗಳ ಮೂಲಕ ಸಮಾಜವನ್ನು ನಿರ್ಮಿಸಲು ಮತ್ತು ಪ್ರಾಬಲ್ಯವನ್ನು ಉತ್ಪಾದಿಸಲು ಸಹಾಯ ಮಾಡಿದ ನಿರ್ದೇಶಕರು ಮತ್ತು ಸಂಘಟಕರು ಎಂದು ಅವರು ಪ್ರತಿಪಾದಿಸಿದರು. ಇದಲ್ಲದೆ, ಅವರು ಸಮಾಜದಿಂದ ಹೊರತಾಗಿ ತನ್ನನ್ನು (ತಪ್ಪಾಗಿ) ಒಂದು ವರ್ಗವಾಗಿ ನೋಡುವ ಸಾಂಪ್ರದಾಯಿಕ ಬುದ್ಧಿಜೀವಿಗಳು ನಡುವೆ ಮತ್ತು ಪ್ರತಿಯೊಂದು ವರ್ಗವು ತನ್ನದೇ ಆದ ಶ್ರೇಣಿಯಿಂದ ಸಾವಯವವಾಗಿ ಉತ್ಪಾದಿಸುವ ಚಿಂತನೆಯ ಗುಂಪುಗಳ ನಡುವೆ ವ್ಯತ್ಯಾಸವನ್ನು ತೋರಿಸಿದರು. ಅಂತಹ ಸಾವಯವ ಬುದ್ಧಿಜೀವಿಗಳು ವೈಜ್ಞಾನಿಕ ನಿಯಮಗಳಿಗೆ ಅನುಗುಣವಾಗಿ ಸಾಮಾಜಿಕ ಜೀವನವನ್ನು ಸರಳವಾಗಿ ವಿವರಿಸುವುದಿಲ್ಲ. ಬದಲಿಗೆ ಸಂಸ್ಕೃತಿಯ ಭಾಷೆಯ ಮೂಲಕ, ಜನಸಾಮಾನ್ಯರು ತಮ್ಮನ್ನು ತಾವು ವ್ಯಕ್ತಪಡಿಸಲು ಸಾಧ್ಯವಾಗದ ಭಾವನೆಗಳು ಮತ್ತು ಅನುಭವಗಳನ್ನು ವ್ಯಕ್ತಪಡಿಸುತ್ತಾರೆ.[8]

ಕಾರ್ಮಿಕ ವರ್ಗದ ಸಂಸ್ಕೃತಿಯನ್ನು ರಚಿಸುವ ಅಗತ್ಯವು ಬುದ್ಧಿಜೀವಿಗಳನ್ನು ಅಭಿವೃದ್ಧಿಪಡಿಸುವ

[8] ಬರಗೂರು ರಾಮಚಂದ್ರಪ್ಪ. *ಬೆವರು ನನ್ನ ದೇವರು. ಸಮಗ್ರ ಸಾಹಿತ್ಯ ಸಂಪುಟ 05, ಅಂಕಣ ಬರಹ 01* ಅಭಿರುಚಿ ಪ್ರಕಾಶನ.

ಒಂದು ರೀತಿಯ ಶಿಕ್ಷಣಕ್ಕಾಗಿ ಗ್ರಾಂಸಿಯ ಕರೆಗೆ ಸಂಬಂಧಿಸಿದೆ, ಅವರು ಕೇವಲ ಶ್ರಮಜೀವಿಗಳ ಕರೆಗೆ ಸಂಬಂಧಿಸಿದಂತೆ, ಹೊರಗಿನಿಂದ ಮಾರ್ಕ್ಸ್‌ವಾದಿ ಸಿದ್ಧಾಂತವನ್ನು ಪರಿಚಯಿಸುವುದಿಲ್ಲ, ಬದಲಿಗೆ ಈಗಾಗಲೇ ಯಥಾಸ್ಥಿತಿಯನ್ನು ನವೀಕರಿಸಿಸುತ್ತಾರೆ ಮತ್ತು ವಿಮರ್ಶಾತ್ಮಕವಾಗಿಸುತ್ತಾರೆ. ಜನಸಾಮಾನ್ಯರ ಅಸ್ತಿತ್ವದಲ್ಲಿರುವ ಬೌದ್ಧಿಕ ಚಟುವಟಿಕೆ. ಈ ಉದ್ದೇಶಕ್ಕಾಗಿ ಶಿಕ್ಷಣ ವ್ಯವಸ್ಥೆಯ ಕುರಿತಾದ ಅವರ ಆಲೋಚನೆಗಳು ವಿಮರ್ಶಾತ್ಮಕ ಶಿಕ್ಷಣಶಾಸ್ತ್ರ ಮತ್ತು ಜನಪ್ರಿಯ ಶಿಕ್ಷಣದ ಕಲ್ಪನೆಯೊಂದಿಗೆ ಅನುರೂಪವಾಗಿದೆ ಮತ್ತು ನಂತರದ ದಶಕಗಳಲ್ಲಿ ಬ್ರೆಜಿಲ್‌ನಲ್ಲಿ ಪಾಲೊ ಫ್ರೈರ್ ಅವರಿಂದ ಸಿದ್ಧಾಂತ ರೂಪುಗೊಂಡಿತು ಮತ್ತು ಫ್ರಾಂಚ್ ಫ್ಯಾನಾನ್ ಅವರ ಚಿಂತನೆಯೊಂದಿಗೆ ಹೆಚ್ಚು ಸಾಮ್ಯತೆಯನ್ನು ಹೊಂದಿದೆ. ಈ ಕಾರಣಕ್ಕಾಗಿ ವಯಸ್ಕ ಮತ್ತು ಜನಪ್ರಿಯ ಶಿಕ್ಷಣದ ಪಕ್ಷಪಾತಿಗಳು ಗ್ರಾಂಸಿಯನ್ನು ಇಂದಿಗೂ ಪ್ರಮುಖ ಧ್ವನಿ ಎಂದು ಪರಿಗಣಿಸುತ್ತಾರೆ.

**ನಿಷ್ಕ್ರಿಯ ಕ್ರಾಂತಿ**

ನಿಷ್ಕ್ರಿಯ ಕ್ರಾಂತಿಯು ತಮ್ಮ ಸ್ವರಕ್ಷಣೆಗಾಗಿ ಆಳುವ ವರ್ಗಗಳಿಂದ ಬಲವಾದ ಸಾಮಾಜಿಕ ಪ್ರಕ್ರಿಯೆಗಳಿಲ್ಲದೆ ರಾಜಕೀಯ ಮತ್ತು ಸಾಂಸ್ಥಿಕ ರಚನೆಗಳ ರೂಪಾಂತರವಾಗಿದೆ. ಈ ಪದಗುಚ್ಛವನ್ನು ಇಟಲಿಯಲ್ಲಿ ಅಂತರ್ಯುದ್ಧದ ಅವಧಿಯಲ್ಲಿ ಮಾರ್ಕ್ಸ್‌ವಾದಿ ರಾಜಕಾರಣಿ ಮತ್ತು ತತ್ವಜ್ಞಾನಿ ಆಂಟೋನಿಯೊ ಗ್ರಾಂಸಿ ಮೊದಲು ಬಳಸಿದ್ದಾರೆ.

ನಿಷ್ಕ್ರಿಯ ಕ್ರಾಂತಿಯು ರಾಜ್ಯ ಮತ್ತು ಆರ್ಥಿಕತೆಯ ಕ್ರಮೇಣ ಆದರ ನಿರಂತರ ಮರುಸಂಘಟನೆಯನ್ನು ವಿವರಿಸುತ್ತದೆ. ವಿರೋಧಿ ಗುಂಪುಗಳ ಶಕ್ತಿಯನ್ನು ಸಂಯೋಜಿಸುವ ಅಥವಾ ತಟಸ್ಥಗೊಳಿಸುವ ಮೂಲಕ ಅವರನ್ನು ಪಾಲುದಾರರನ್ನಾಗಿ ಪರಿವರ್ತಿಸುವ ಮೂಲಕ, ಎಲ್ಲಾ ಮೂಲಭೂತ ಸಾಮಾಜಿಕ ವಿರೋಧಾಭಾಸಗಳನ್ನು ನಿವಾರಿಸದೆ. ಒಂದು ಸಾಮಾಜಿಕ ಗುಂಪಿಗೆ ಪ್ರಾಬಲ್ಯವನ್ನು ಸ್ಥಾಪಿಸುವ ಶಕ್ತಿ ಇಲ್ಲದಿದ್ದಾಗ, ಅದು ತನ್ನ ಆಸಕ್ತಿಗಳು ಮತ್ತು ಬೇಡಿಕೆಗಳನ್ನು "ಸಣ್ಣ ಪ್ರಮಾಣದಲ್ಲಿ ಕಾನೂನುಬದ್ಧವಾಗಿ, ಸುಧಾರಣವಾದಿ ರೀತಿಯಲ್ಲಿ ತೃಪ್ತಿಪಡಿಸುವ ಮಾರ್ಗವನ್ನು ಆರಿಸಿಕೊಳ್ಳುತ್ತದೆ" ಎಂದು ಗ್ರಾಂಸಿ ವಾದಿಸಿದರು. ಇದರಿಂದ ಹಳೆಯ ಆಡಳಿತ ವರ್ಗದ ರಾಜಕೀಯ ಮತ್ತು ಆರ್ಥಿಕ ಸ್ಥಾನಗಳನ್ನು ಉಳಿಸಿಕೊಳ್ಳಲು ಸಾಧ್ಯವಾಯಿತು. ಇದು "ಜಾಕೋಬಿನಿಸಂನ ವರ್ಷಗಳಲ್ಲಿ ಫ್ರಾನ್ಸ್‌ನಲ್ಲಿ ಸಂಭವಿಸಿದಂತಹ ರಾಜಕೀಯ ಅನುಭವದ ಅವಧಿಯ ಮೂಲಕ ಹಾದುಹೋಗುವ ಜನಪ್ರಿಯ ಜನಸಮೂಹವನ್ನು ತಪ್ಪಿಸಿ" ಎಂದು ಹೇಳಬಹುದು.

ಗ್ರಾಂಸಿ "ನಿಷ್ಕ್ರಿಯ ಕ್ರಾಂತಿ"ಯನ್ನು ಸ್ವಲ್ಪ ವಿಭಿನ್ನ ಅರ್ಥಗಳೊಂದಿಗೆ ವಿವಿಧ ಸಂದರ್ಭಗಳಲ್ಲಿ ಬಳಸುತ್ತಾರೆ. 19ನೇ ಶತಮಾನದ ಇಟಲಿಯಲ್ಲಿ ಬೂರ್ಜ್ವಾ ಸಮಾಜದ ನಿಷ್ಕ್ರಿಯ ರೂಪಾಂತರವನ್ನು ಫ್ರಾನ್ಸ್‌ನಲ್ಲಿನ ಬೂರ್ಜ್ವಾಗಳ ಸಕ್ರಿಯ ಕ್ರಾಂತಿಕಾರಿ ಪ್ರಕ್ರಿಯೆಯೊಂದಿಗೆ ವ್ಯತಿರಿಕ್ತಗೊಳಿಸುವುದು ಪ್ರಾಥಮಿಕ ಬಳಕೆಯಾಗಿದೆ. ಫ್ರೆಂಚ್ ಪ್ರಕರಣವನ್ನು ಗ್ರಾಂಸಿ ಅವರು ಸಾಮಾಜಿಕ ಶಕ್ತಿಗಳಿಂದ ಮಾರ್ಗದರ್ಶಿಸಲ್ಪಟ್ಟ ಒಂದು ಅಧಿಕೃತ ಕ್ರಾಂತಿಯಾಗಿ ನೋಡಿದಾಗ, ಇಟಾಲಿಯನ್ ಪ್ರಕರಣವು 'ಗಣ್ಯ-ಚಾಲಿತ' ಆಧುನೀಕರಣ ಪ್ರಕ್ರಿಯೆಯು ಇಟಲಿಯಲ್ಲಿ ಅಧಿಕಾರದ ಸಾಮಾಜಿಕ ವ್ಯವಸ್ಥೆಗಳನ್ನು ಅಡ್ಡಿಪಡಿಸಲಿಲ್ಲ ಆದರ ಬದಲಿಗೆ ತಮ್ಮ ಸ್ಥಾನವನ್ನು ಭದ್ರಪಡಿಸಿಕೊಳ್ಳಲು ಗಣ್ಯ ವರ್ಗಗಳ ಪರವಾಗಿ ಅದನ್ನು ಆಧುನೀಕರಿಸಿತು. ವಿವರಿಸಿದ ಬದಲಾವಣೆಯು ಹಠಾತ್ ಅಲ್ಲ ಆದರೆ ನಿಧಾನ ಮತ್ತು ಕ್ರಮೇಣ ರೂಪಾಂತರವಾಗಿದೆ, ಇದು ಸಾಧಿಸಲು ವರ್ಷಗಳು ಅಥವಾ ತಲೆಮಾರುಗಳನ್ನು ತೆಗೆದುಕೊಳ್ಳಬಹುದು.[9]

ಫ್ರೆಂಚ್ ಕ್ರಾಂತಿಯ ವಿರುದ್ಧ ಇಟಾಲಿಯನ್ ಪ್ರಕರಣದ ಹೋಲಿಕೆಯ ಜೊತೆಗೆ, ಗ್ರಾಂಸಿ ಇಟಾಲಿಯನ್ ಫ್ಯಾಸಿಸಂ ಅನ್ನು ನಿಷ್ಕ್ರಿಯ ಕ್ರಾಂತಿಯ

---

[9] ಪಣಿರಾಜ್, ಕೆ. (2003). ಆಂಟೊನಿಯೋ ಗ್ರಾಮ್ಷಿ, ಜಿ.ರಾಜಶೇಖರ್ (ಪ್ರಧಾನ ಸಂ). ಶತಮಾನ ಚಿಂತನೆ.

ಕಲ್ಪನೆಯೊಂದಿಗೆ ಸಂಯೋಜಿಸುತ್ತಾನೆ. ಗ್ರಾಂಸಿ ಅವರು 1920 ಮತ್ತು 1930 ರ ದಶಕದ ಯುಎಸ್ ಕಾರ್ಖಾನೆ ವ್ಯವಸ್ಥೆಯ ಅಭಿವೃದ್ಧಿಯಲ್ಲಿ ಪ್ರಾಥಮಿಕವಾಗಿ ಗುರುತಿಸಿದ ಬಂಡವಾಳಶಾಹಿ ಆರ್ಥಿಕ ಉತ್ಪಾದನೆಯ ರಚನೆಗಳ ರೂಪಾಂತರಗಳಿಗೆ ಈ ಪದವನ್ನು ಬಳಸಿದರು. ನಿಷ್ಕ್ರಿಯ ಕ್ರಾಂತಿಯನ್ನು ನಿರ್ದಿಷ್ಟವಾಗಿ ಇಟಲಿಯಲ್ಲಿ ರಾಜ್ಯ ಪುನರ್ ರಚನೆಯ ಗಣ್ಯ ಪ್ರಕ್ರಿಯೆ ಎಂದು ಗ್ರಾಂಸಿ ವಿವರಿಸಿದ್ದಾರೆ. ಆದರೆ ಬಂಡವಾಳಶಾಹಿ ಆಧುನಿಕತೆಗೆ ಇತರ ಪರಿವರ್ತನೆಗಳನ್ನು ವೀಕ್ಷಿಸಲು ಇದನ್ನು ವಿಶ್ಲೇಷಣೆಯ ಚೌಕಟ್ಟಿನಂತೆ ಬಳಸಲಾಗುತ್ತದೆ.

**ಪರಾಮರ್ಶನ ಗ್ರಂಥಗಳು**


- ಬರಗೂರು ರಾಮಚಂದ್ರಪ್ಪ. *ಬೆವರು ನನ್ನ ದೇವರು. ಸಮಗ್ರ ಸಾಹಿತ್ಯ ಸಂಪುಟ 05, ಅಂಕಣ ಬರಹ 01* ಅಭಿರುಚಿ ಪ್ರಕಾಶನ.
- ಮೇಟಿ ಮಲ್ಲಿಕಾರ್ಜುನ (ಪ್ರ.ಸಂ.) *ಕರ್ನಾಟಕ ಸಬಾಲ್ಟರನ್ ಓದು ಮಾಲಿಕೆ ಸಂಪುಟ–01 ತಾತ್ವಿಕತೆ.* ಕರ್ನಾಟಕ ಸಾಹಿತ್ಯ ಅಕಾಡೆಮಿ.
- ಪಣಿರಾಜ್, ಕೆ. (2003). ಆಂಟೊನಿಯೋ ಗ್ರಾಮ್ಷಿ, ಜೆ.ರಾಜಶೇಖರ್ (ಪ್ರಧಾನ ಸಂ). ಶತಮಾನ ಚಿಂತನೆ.
- ವಿಜಯ ಪೂಣಚ್ಚ ತಂಬಂಡ. (2007). *ವರ್ಗದಿಂದ ಸಂಸ್ಕೃತಿಯಡೆಗೆ ಸಬಾಲ್ಟರನ್ ಅಧ್ಯಯನ.* ಪ್ರಸಾರಾಂಗ, ಕನ್ನಡ ವಿಶ್ವಾವಿದ್ಯಾಲಯ ಹಂಪಿ. ಪುಟ. 32 ಮತ್ತು 33.
- ರಹಮತ್ ತರೀಕರೆ, ಪ್ರತಿ ಸಂಸ್ಕೃತಿ, ಪ್ರಕಟಣೆ ಅಭಿನವ ಮಾರೇನಹಳ್ಳಿ ವಿಜಯನಗರ, ಬೆಂಗಳೂರು–560040–2017.
- Antonio Gramsci. (2021). Selection from the prison note books, orient Blackswan Private Limited.
- Ranjitha Guha.(2000). *A Subaltern studies reader*. Oxford University Press.
- Walter L.Adamron. (2014). *A Study of Antonio Gramscis political and cultural theory*. Echo point Books and Media.
- Walter L.Adamson. (2014). *Hegemony and revolution Echo point books and Media*. Page No. 6 to 19